ಸೆಲೆಬ್ರಿಟಿ

## ಭಲೇ ಜೋಡಿ



ಅಂಜಾನಾ ಅಂಜಾನೀ ಸಿನಿಮಾ ಬಿಡುಗಡೆಗೆ ಸಿದ್ಧವಾಗಿದೆ. ಅದರ ಬೆನ್ನಲ್ಲೆ ಅನುರಾಗ್ ಬಸು ನಿರ್ದೇಶನದ ಹೊಸ ಚಿತ್ರ ಘೋಷಣೆಯಾಗಿದೆ. ಈ ಚಿತ್ರದಲ್ಲೂ ರಣಬೀರ್ ಮತ್ತು ಪ್ರಿಯಾಂಕಾ ಜೋಡಿ. ಸತತವಾಗಿ ನಾಲ್ಕನೇ ಚಿತ್ರಕ್ಕೆ ಈ ಜೋಡಿ ಆಯ್ಕೆಯಾಗಿದೆ! ಇದೀಗ ಬಾಲಿವುಡ್‌ನ ಅತ್ಯಂತ ಜನಪ್ರಿಯ ಜೋಡಿ.

'ರಣಬೀರ್ ಮತ್ತು ನಿಮ್ಮ ಮಧ್ಯೆ ಕುಚ್‌ಕುಚ್ ನಡೆದಿದೆಯಂತಲ್ಲ?' ಎಂದು ಪತ್ರಕರ್ತರು ಕೆದಕಿದರೆ, 'ಅಯ್ಯೊ ಬಿಡ್ರೀ. ನೀವು ಪತ್ರಕರ್ತರು ನಾನು ನಟಿಸಿದ ಎಲ್ಲ ಹೀರೊಗಳ ಜತೆಗೂ ಸಂಬಂಧ ಕಲ್ಪಿಸಿದ್ದೀರಿ. ಯಾರನ್ನು ಬಿಟ್ಟಿದ್ದೀರಿ?' ಎಂದು ಪ್ರಿಯಾಂಕಾ ತುಟಿಯಲ್ಲೇ ನಕ್ಕಳಂತೆ. ರಣಬೀರ್‌ನನ್ನು ಕೇಳಿದರೆ, 'ನಟಿಸೋದು, ಚೆಕ್ ತಗೊಳ್ಳೋದು– ಆಮೇಲೆ ಚಿತ್ರವನ್ನು ದೇವರಿಗೆ ಮತ್ತು ಪ್ರೇಕ್ಷಕರಿಗೆ ಬಿಟ್ಟು ಹಾಯಾಗಿರೋದು ಅಷ್ಟೆ ನನಗೆ ಗೊತ್ತು. ಐ ಡೋಂಟ್ ಕೇರ್' ಅಂದನಂತೆ. ಅದಾದ ಮರುವಾರವೇ ಇಬ್ಬರೂ ಯೂರೋಪಿನಲ್ಲಿ ಸುತ್ತಾಡುತ್ತಿರುವ ಸುದ್ದಿ ಬಂದಿದೆ!

## ಶಕೀರಾ ಸಕ್ಸೆಸ್

'ಹಿಪ್ಸ್ ಡೋಂಟ್ ಲೈ' ಎನ್ನುವ ಟೈಟಲ್ಲೇ ಅತ್ಯಾಕರ್ಷಕ. ಅದರಲ್ಲೂ ಶಕೀರಾಳಂತಹ ಸಖತ್ ಸೊಂಟ ಕುಣಿಸುವ ಸುಂದರಿಗೆ ಇದಕ್ಕಿಂತ ಆಕರ್ಷಕ ಟೈಟಲ್ ಸಿಗಲಿಕ್ಕಿಲ್ಲ. ಶಕೀರಾಳ ಈ ಮ್ಯೂಸಿಕ್ ವೀಡಿಯೊ ಬಿಸಿ ದೋಸೆಗೂ ಮಿಗಿಲಾಗಿ ಖರ್ಚಾದದ್ದು ಈಗ ಇತಿಹಾಸ. ಇದೀಗ ಉತ್ತರ ಅಮೆರಿಕಾದ ಲೈವ್ ಷೋ ಪ್ರವಾಸದಲ್ಲಿರುವ ಶಕೀರಾ ಕೆನಡಾದಲ್ಲಂತೂ ಅಭಿಮಾನಿಗಳನ್ನು ಹುಚ್ಚೆಬ್ಬಿಸಿದ್ದಾಳೆ. ಸದ್ಯಕ್ಕಂತೂ ಸಂಗೀತ–ನೃತ್ಯದ ತಾರೆಯರ ಪೈಕಿ ಶಕೀರಾಳನ್ನು ಮೀರಿಸುವವರು ಯಾರೂ ಕಾಣುತ್ತಿಲ್ಲ.

ಅಭಿಮಾನದ ಮಹಾಪೂರವನ್ನು ಹೇಗೆ ನಗದು ಮಾಡಿಕೊಳ್ಳಬೇಕೆನ್ನುವುದೂ ಶಕೀರಾಗೆ ಚೆನ್ನಾಗಿ ಗೊತ್ತಿದೆ. ಅದಕ್ಕೆಂದೇ ಉತ್ತರ ಅಮೆರಿಕಾದ ಪ್ರವಾಸದಲ್ಲಿ ಶಕೀರಾ ಹೊಸ ಯೋಜನೆ ಪ್ರಕಟಿಸಿದಳು. ಲಕ್ಕೀ ವಿಜೇತ ಅಭಿಮಾನಿಗಳಿಗೆ ಲಕ್ಷಾಂತರ ಜನರ ಎದುರು ವೇದಿಕೆಯಲ್ಲಿ ತನ್ನ ಜತೆಗೆ ಡ್ಯಾನ್ಸ್ ಮಾಡುವ ಅವಕಾಶ! ಶಕೀರಾಳ ಈ ಟ್ರಿಕ್ ಗೆದ್ದಿದೆ. ಶಕೀರಾ ಜತೆ ನರ್ತಿಸಲು ಲಕ್ಷಾಂತರ ಜನ ಆಕೆಯ ಲೈವ್ ಷೋ ಗೆ ಸೇರುತ್ತಿದ್ದಾರೆ.



## ದಂಡ ವಸೂಲಿ



ಮಹಾತಾರೆಯರ ಸಂಕಷ್ಟಗಳು ನೂರೆಂಟು. ಅದರಲ್ಲೂ ಅವರು ಕೋಟಿಗಟ್ಟಳೆ ಹಣ ದುಡಿಯುವ ತಾರೆಯರೆಂದರೆ ಕೇಳಬೇಕೆ? ಟೈಗರ್ ವುಡ್ಸ್ ತಮ್ಮ ಪರಿತ್ಯಕ್ತ ಪತ್ನಿಗೆ ಕೋಟ್ಯಂತರ ಡಾಲರ್ ಪರಿಹಾರ ಕೊಟ್ಟದ್ದು ಇತ್ತೀಚೆಗೆ ದೊಡ್ಡ ಸುದ್ದಿಯಾಗಿತ್ತು. ಇದೀಗ ಅದೇ ರೀತಿಯ ಇನ್ನೊಂದು ದೊಡ್ಡ ಸುದ್ದಿ ಹಾಲಿವುಡ್ ತಾರೆ ಮೆಲ್ ಗಿಬ್ಸನ್‌ಗೆ ಸಂಬಂಧಿಸಿದ್ದು. ಮೆಲ್ ಗಿಬ್ಸನ್ ತನ್ನ ಮಾಜಿ ಪ್ರೇಯಸಿ ರಶ್ಯಾದ ಗಾಯಕಿ ಒಕ್ಸಾನಾ ಗ್ರೆಗೊರಿನಾಗೆ ಸೋಡಾ ಚೀಟಿ ಕೊಟ್ಟದ್ದು ಕಳೆದ ಏಪ್ರಿಲ್‌ನಲ್ಲಿ. ಆಕೆ ಪರಿಹಾರಕ್ಕೆ ಕೇಸು ಹಾಕಿ ಕೂತಿದ್ದಳು.

ನಾಲ್ಕು ತಿಂಗಳ ಬಳಿಕ ಗಿಬ್ಸನ್ ತನ್ನ ಮಾಜಿ ಪ್ರೇಯಸಿಗೆ ಸಖತ್ ಹಿಂಸೆ ಕೊಡುತ್ತಿದ್ದ ವೀಡಿಯೊ ತುಣುಕುಗಳು ಅಂತರ್ಜಾಲದಲ್ಲಿ ಲೀಕ್ ಆಗಿವೆ! ಮಹಾತಾರೆ ಗಿಬ್ಸನ್ನನ ಮರ್ಯಾದೆ ಮೂರು ಕಾಸಿಗೆ ಹರಾಜಾಗುತ್ತಿರುವುದು ಅಭಿಮಾನಿಗಳಿಗೆ ನೋಡಲಾಗುತ್ತಿಲ್ಲ. ಆಕೆಯನ್ನು ಕೇಳಿದರೆ, 'ಯಾರು ಲೀಕ್ ಮಾಡಿದ್ದೆಂದು ನನಗೆ ಗೊತ್ತೇ ಇಲ್ಲ' ಅಂದಿದ್ದಾಳೆ! ರಗಳೆಯೇ ಬೇಡವೆಂದು ಮೆಲ್ ಗಿಬ್ಸನ್ ಇದೀಗ ತನ್ನ ಮಾಜಿ ಪ್ರೇಯಸಿಗೆ ಒಂದು ದಶಲಕ್ಷ ಡಾಲರ್ ಪರಿಹಾರ ನೀಡುವುದಾಗಿ ವಕೀಲರ ಮೂಲಕ ಪ್ರಸ್ತಾಪ ಮುಂದಿಟ್ಟಿದ್ದಾನಂತೆ!

## ದೈತ್ಯ ದುಡಿಮೆಗಾರ

ಭಾಷೆಯ ಹಂಗಿಲ್ಲದ, ವಯಸ್ಸಿನ ಹಂಗಿಲ್ಲದ ಮೆಗಾಸ್ಟಾರ್ ರಜನಿಕಾಂತ್! ರಜನಿಯ ಅಭಿಮಾನಿಗಳು ದೇಶ ವಿದೇಶಗಳಲ್ಲಿ ಹರಡಿದ್ದಾರೆ. 'ಸುಂದರಾಂಗ' ಶಬ್ದದ ಮಾಡೆಲಿಂಗ್ ಸೊಸೈಟಿಯ ಕಲ್ಪನೆಗೆ ಸದಾ ವಿರುದ್ಧವಾಗಿರುವ ರಜನಿಯದ್ದು ಸ್ವಂತದ ಸ್ಟೈಲ್. ಅದಕ್ಕೆಂದೇ ಸ್ಟೈಲ್‌ಕಿಂಗ್ ಎಂಬ ಹೆಸರೇ ಅನ್ವರ್ಥಕ. ಕೆಲಸದ ವಿಷಯಕ್ಕೆ ಬಂದರೂ ಹಾಗೆಯೇ. ರಜನಿ ದುಡಿಯುವ ದೈತ್ಯ!

ಈಗ ರಜನಿ ಹೊಸ ಚಿತ್ರ 'ರೋಬೊಟ್' ಬಿಡುಗಡೆಯ ಹೊಸ್ತಿಲಲ್ಲಿ ಚಿತ್ರದ ಕುರಿತು ನೂರೆಂಟು ದಂತಕಥೆಗಳು ಹೊರಬಿದ್ದಿವೆ. ಅದರಲ್ಲೊಂದು ದೃಶ್ಯಕ್ಕೆ ರಜನಿ 17 ಗಂಟೆಗಳ ಕಾಲ ಬಾತ್ ಟಬ್‌ನಲ್ಲಿ ಮಲಗಿ ಕಳೆದದ್ದು!



ಟೇಬಲ್ ಮೇಲೆ ರೋಬೊಟ್‌ಅನ್ನು ಮಲಗಿಸಿ ನಿರ್ದೇಶಕ ಸೂಚನೆಗಳನ್ನು ನೀಡುತ್ತಿದ್ದರೆ, ರಜನಿ ಅದನ್ನು ಅನುಸರಿಸುತ್ತಾ 17 ಗಂಟೆ ಕಳೆದನಂತೆ. ಅವಿರತ ದುಡಿಮೆಯಿಂದ ಶಕ್ತಿಗುಂದಬಾರದೆಂದು 2 ಗಂಟೆಗೊಮ್ಮೆ ವಿಟಮಿನ್ ಮಾತ್ರೆ ತಿನ್ನುತ್ತಿದ್ದನಂತೆ!

ಸುದ್ದಿ ಮೊದಲೇ ಗೊತ್ತಿದ್ದರೆ, ಆ ವಿಟಮಿನ್ ಮಾತ್ರೆಯ ಕಂಪೆನಿಯವರು ಜಗತ್ತಿಡೀ ಟಾಂ.. ಟಾಂ ಹೊಡೆದುಕೊಂಡು ಪುಕ್ಕಟೆ ಪ್ರಚಾರ ಪಡೆಯುತ್ತಿದ್ದರೋ ಏನೊ!

■ ಬಿಂದು

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65